


ಇನ್ನೇನು ತಿನ್ನಬೇಕು ಎಂದು ಅವರು ಯೋಚಿಸುತ್ತಿದ್ದಾಗ, ಬಾಗಿಲಲ್ಲಿ ಒಂದು ಧ್ವನಿ ಕೇಳಿಸಿತು.
ಅಮ್ಮ! ಹಸಿವಿನಿಂದ ಸಾಯುತ್ತಿದ್ದೇನೆ. ತಿನ್ನಲು ಏನಾದರೂ ಇದ್ದರೆ ಕೊಡಿ.
12
ಅವರಿಬ್ಬರೂ ಒಬ್ಬರ ಮುಖ ಒಬ್ಬರು ನೋಡಿಕೊಂಡರು.
ಪಾಪ, ಯಾರೋ ಹಸಿವಿನಿಂದ ನರಳುತ್ತಿದ್ದಾರೆ. ನನ್ನ ಪಾಲಿನದನ್ನು ಅವನಿಗೆ ಕೊಟ್ಟುಬಿಡು.
13
ಅರ್ಧರೊಟ್ಟಿಯಿಂದ ಅವನ ಹಸಿವು ಹೇಗೆ ಹಿಂಗುತ್ತದೆ? ನನ್ನ ಪಾಲಿನದನ್ನೂ ಅವನಿಗೆ ಕೊಟ್ಟುಬಿಡುತ್ತೇನೆ.
ಕಣ್ಣಮ್ಮ ಎಲ್ಲಾ ರೊಟ್ಟಿಯನ್ನೂ ಆ ಭಿಕ್ಷುಕನಿಗೇ ಕೊಟ್ಟುಬಿಟ್ಟಳು. ಅವನು ಅದನ್ನು ತೃಪ್ತಿಯಿಂದ ತಿಂದನು.
14
ಮಗಳೇ! ಭಗವಂತ ನಿನ್ನನ್ನು ಆಶೀರ್ವದಿಸಲಿ.
ಅವನು ಅತ್ತ ಹೋದುದೇ ತಡ, ತಾಯಿ-ಮಗಳು ಹಸಿವಿನಿಂದ ಮೂರ್ಛೆಬಿದ್ದರು. ಆಗ ಕಮಲಳಿಗೆ ಒಂದು ಕನಸಾಯಿತು. ಅದರಲ್ಲಿ ದೇವರು ಪ್ರತ್ಯಕ್ಷನಾಗಿ ಹೇಳಿದನು......
15
ಕಮಲಾ, ನೀನು ಹಾಗೂ ನಿನ್ನ ಮಗಳು ಅಷ್ಟು ಹಸಿವಿನಿಂದಿದ್ದರೂ, ಸಂತೋಷದಿಂದ ನಿಮ್ಮಲ್ಲಿದ್ದುದನ್ನು ಆ ನಾಯಿಗೂ ಭಿಕ್ಷುಕನಿಗೂ ಕೊಟ್ಟುಬಿಟ್ಟಿರಿ. ನಿಮ್ಮನ್ನು ಪರೀಕ್ಷಿಸಲು ನಾನೇ ಆ ನಾಯಿ ಹಾಗೂ ಭಿಕ್ಷುಕನ ವೇಷದಲ್ಲಿ ಬಂದಿದ್ದೆ. ನಿಮಗೆ ಬೇಕಾದಷ್ಟು ಧನ ದೊರೆತು, ನಿಮ್ಮ ಜೀವನ ಸುಖಮಯವಾಗಲಿ.
ಕಮಲಳಿಗೆ ಎಚ್ಚರವಾದಾಗ ಒಂದು ಅದ್ಭುತ ಕಾದಿತ್ತು. ದೇವರ ದಯೆಯಿಂದ ಅವಳ ಗುಡಿಸಲು ಅರಮನೆಯಾಗಿ ಮಾರ್ಪಾಡು ಹೊಂದಿತ್ತು. ಮನೆಯ ತುಂಬಾ ಧಾನ್ಯ, ಹೊಸ ಬಟ್ಟೆಗಳು, ಹಣ ತುಂಬಿತ್ತು. ಅದು ಕುಬೇರನ ಅರಮನೆಯಂತಿತ್ತು.
ಅವರು ಆ ಗ್ರಾಮದ ಜನರಿಗೆಲ್ಲಾ ಹೊಟ್ಟೆ ತುಂಬಾ ಊಟ ಹಾಕಿದರು. ಅವರ ಪುಣ್ಯ ಕಾರ್ಯದಿಂದ ಆ ಗ್ರಾಮದಲ್ಲಿ ಮಳೆಯೂ ಬಂದಿತು. ಕ್ಷಾಮ ಮಾಯವಾಗಿ ಎಲ್ಲೆಲ್ಲೂ ಸಮೃದ್ಧಿ ತುಂಬಿತು.
ಈ ಕಥೆಯಿಂದ ಅರ್ಥವಾಗುವ ಸತ್ಯವೆಂದರೆ ಯಾರು ಇತರರಿಗಾಗಿ ಎಲ್ಲವನ್ನೂ ತ್ಯಾಗ ಮಾಡುವರೋ ಅವರ ಮೇಲೆ ದೇವರ ಕರುಣೆ ಸಮೃದ್ಧಿಯಾಗಿ ಇರುತ್ತದೆ.







**ಸುದ್ದಿ ಸಂಚಯ**

# ಬೆಳಗಾವಿ ರಾಮಕೃಷ್ಣ ಮಿಷನ್ ಆಶ್ರಮದ ರಜತೋತ್ಸವ

ಸ್ವಾಮಿ ವಿವೇಕಾನಂದರು ೧೮೯೨ರಲ್ಲಿ ಬೆಳಗಾವಿಗೆ ಭೇಟಿ ನೀಡಿದಾಗ ೯ ದಿನಗಳ ಕಾಲ ತಂಗಿ ಪಾವನಗೊಳಿಸಿದ ಮನೆಯ ಆವರಣ ದಲ್ಲಿಯೇ **ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮವು** ೨೦೦೦ ಇಸವಿಯ ಜೂನ್ ೧ರಂದು ಪ್ರಾರಂಭವಾಯಿತು. ಆಶ್ರಮವು ಜೂನ್ ೨೦೨೫ರಲ್ಲಿ ತನ್ನ ಆಧ್ಯಾತ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಸೇವೆಯಲ್ಲಿ ೨೫ ವರ್ಷಗಳನ್ನು ಪೂರ್ಣಗೊಳಿಸಿ, ಒಂದು ಮಹತ್ವಪೂರ್ಣ ಮೈಲಿಗಲ್ಲನ್ನು ತಲುಪಿದೆ.

ರಜತೋತ್ಸವದ ಅಂಗವಾಗಿ ೨೦೨೫ರ ಜೂನ್ ೮ ಭಾನುವಾರದಂದು ಬೆಳಿಗ್ಗೆ ೯.೩೦ಕ್ಕೆ ಶಿಬಿರಾರ್ಥಿಗಳಿಗಾಗಿ ನಿರ್ಮಿಸಲಾಗುವ **'ವಿವೇಕಾನಂದ ಭವನ'**ದ ಭೂಮಿಪೂಜೆಯನ್ನು ರಾಮಕೃಷ್ಣ ಮಠ ಹಾಗೂ ರಾಮಕೃಷ್ಣ ಮಿಷನ್ನಿನ ಪರಮಾಧ್ಯಕ್ಷರಾದ **ಪರಮಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್** ಅವರು ನೆರವೇರಿಸಿದರು.

ಈ ರಜತೋತ್ಸವದ ನೆನಪಿಗಾಗಿ ಬೆಳಗ್ಗೆ ೧೦:೩೦ ರಿಂದ ಮಧ್ಯಾಹ್ನ ೧:೩೦ ರವರೆಗೆ ಆಶ್ರಮದ ಆವರಣದಲ್ಲಿ ಒಂದು **ಸಂಸ್ಮರಣ ಸಭೆ**ಯನ್ನು ಏರ್ಪಡಿಸಲಾಯಿತು.

ಪರಮಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಈ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಭಕ್ತರನ್ನು ಆಶೀರ್ವದಿಸಿದರು. ವೇದಘೋಷಗಳೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಬೆಳಗಾವಿ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಆತ್ಮಪ್ರಾಣಾನಂದಜಿ ಮಹಾರಾಜ್ ಅತಿಥಿಗಳನ್ನು ಸ್ವಾಗತಿಸಿದರು.

ಮೈಸೂರು ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಮುಕ್ತಿದಾನಂದಜಿ ಮಹಾರಾಜ್, ಕರ್ನಾಟಕ ಸರ್ಕಾರದ ಕಾನೂನು ಹಾಗೂ ಸಂಸತ್ತೀಯ ವ್ಯವಹಾರಗಳು, ಕಾನೂನು ರಚನೆ ಮತ್ತು ಪ್ರವಾಸೋದ್ಯಮ ಖಾತೆಗಳ ಸಚಿವರಾದ ಶ್ರೀ ಎಚ್. ಕೆ. ಪಾಟೀಲ, ಇವರು ಪ್ರಮುಖ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಗದಗದ ಮಾಜಿ ಶಾಸಕರಾದ ಶ್ರೀ ಡಿ. ಆರ್. ಪಾಟೀಲ, ಮತ್ತು ನಿವೃತ್ತ ಐಪಿಎಸ್ ಹಾಗೂ ಕರ್ನಾಟಕದ ಮಾಜಿ ಡಿಜಿಪಿ ಆಗಿದ್ದ ಶ್ರೀ ವಿ. ವಿ. ಭಾಸ್ಕರ್ ಇವರು ಗೌರವ ಅತಿಥಿಗಳಾಗಿ ಪಾಲ್ಗೊಂಡರು.

ಅಧ್ಯಕ್ಷತೆ ವಹಿಸಿದ್ದ ಪರಮಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಆಶೀರ್ವಚನ ನೀಡಿದರು.

ಸಭಾಕಾರ್ಯಕ್ರಮದ ಕೊನೆಯಲ್ಲಿ ಡಾ. ಎಂ.ವಿ.ಜಾಲಿಯವರು ವಂದನಾರ್ಪಣೆ ನೆರವೇರಿಸಿದರು.

ಸುಮಾರು ೮೦೦ ಜನ ಭಕ್ತರು ಈ ಸಂಸ್ಮರಣ ಸಭೆಯಲ್ಲಿ ಭಾಗವಹಿಸಿ ಪರಮಾಧ್ಯಕ್ಷರಾದ ಪರಮಪೂಜ್ಯ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರ ಆಶೀರ್ವಾದವನ್ನು ಪಡೆದರು.








Managing Editor : Swami Muktidananda
Editor : Swami Jnanayogananda
Printed and Published by Swami Muktidananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020

# ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್

ನಂ. 98, 1ನೇ ಮಹಡಿ ಡಿವಿಜಿ ರಸ್ತೆ, ಬಸವನಗುಡಿ, ಬೆಂಗಳೂರು
Website : www.orchidtours.net

Orchid
ನಿಮ್ಮ ಪ್ರವಾಸ ನಮ್ಮೊಂದಿಗೆ

## ರಿಯಾಯಿತಿ ದರದಲ್ಲಿ ಪ್ರವಾಸಗಳು 2025

## 99000 99252

### 3 ದಿನಗಳ ಅಹೋಬಿಲಂ (ನವನಾರಸಿಂಹ ದರ್ಶನ)

ಜ್ವಾಲಾ ನರಸಿಂಹ, ಅಹೋಬಿಲ ನರಸಿಂಹ, ಮಲೋಲ ನರಸಿಂಹ, ಕ್ರೋಧಕರ ನರಸಿಂಹ,
ಕಾರಂಜ ನರಸಿಂಹ, ಭಾರ್ಗವ ನರಸಿಂಹ, ಯೋಗಾನಂದ ನರಸಿಂಹ, ಚತ್ರವತ ನರಸಿಂಹ, ಪವನ ನರಸಿಂಹ,



### 6 ದಿನಗಳ ಬಾಲಿ–ಇಂಡೊನೇಷಿಯ (ಲ್ಯಾಂಡ್ ಆಫ್ ಗಾಡ್)

ಗರುಡ ವಿಷ್ಣು, ಉಲುವಟು ದೇವಸ್ಥಾನ, ಗೋವಾ ಗಜಾ ಕೇವ್



### 7/11 ದಿನಗಳ ಸಿಂಗಾಪುರ–ಮಲೇಶಿಯ–ಥೈಲ್ಯಾಂಡ್

ಎನ್‌ಜಾಯ್ ವಿತ್ ಫ್ಯಾಮಿಲಿ ಅಂಡ್ ಫ್ರೆಂಡ್ಸ್



### 7 ದಿನಗಳ ಲೇ ಲಡಾಕ್ (ಲ್ಯಾಂಡ್ ಆಫ್ ಬುದ್ಧಿಸಮ್)

ಲೇ, ಶ್ಯಾಂ ವ್ಯಾಲಿ, ನುಬ್ರಾ ವ್ಯಾಲಿ, ಟುರ್‌ಟುಕ್ ಪ್ಯಾಂಗಾಂಗ್ ಲೇಕ್



### 8 ದಿನಗಳ ನೇಪಾಳ ಸ್ಪೆಷಲ್ (ಶ್ರೀ ಮುಕ್ತಿನಾಥ)

ಪಶುಪತಿನಾಥ, ಜಲನಾರಾಯಣ, ಬುದ್ಧ ಸ್ತೂಪ, ಕಠ್ಮಂಡು, ಪೋಕ್ರಾ, ಮನೋಕಾಮನ



### 18 ದಿನಗಳ ಗ್ರಾಂಡ್ ಯು.ಕೆ. ಮತ್ತು ಯೂರೋಪ್ (10 ದೇಶಗಳು)

ಯು.ಕೆ. ಫ್ರಾನ್ಸ್, ನೆದರ್‌ಲ್ಯಾಂಡ್ಸ್, ಬೆಲ್ಜಿಯಂ, ಜರ್ಮನಿ, ಸ್ವಿಟ್ಜರ್‌ಲ್ಯಾಂಡ್, ಇಟಲಿ, ಆಸ್ಟ್ರೀಯಾ



### 7/11 ದಿನಗಳ ವಿಯೇಟ್ನಾಮ್ ಮತ್ತು ಕಾಂಬೋಡಿಯಾ

ಹನಾಯಿ ಸಿಟಿ, ದಾನಾಂಗ್, ಹಾ ಲಾಂಗ್ ಬೇ, ಸೀಮ್ ರೀಪ್, ಪಾಂಪ್ ಪೆನ್



### 5 /9 ದಿನಗಳ ಕಾಶಿ, ಗಯಾ, ಅಯೋಧ್ಯಾ, ಪ್ರಯಾಗ್‌ರಾಜ್

ಕಾಶಿ, ಅಯೋಧ್ಯೆ, ಪ್ರಯಾಗ್‌ರಾಜ್, ಗಯಾ, ಬೌದ್ಧಗಯಾ ಹಾಗೂ ಇತರೆ



### 6 ದಿನಗಳ ದುಬೈ ಶಾಪಿಂಗ್ ಫೇಸ್ಟಿವಲ್

ದುಬೈ ಸಿಟಿ ಟೂರ್, ಬುರ್ಜ್ ಖಲೀಫಾ, ಡೌ ಕ್ರೂಸ್, ಡೆಸರ್ಟ್ ಸಫಾರಿ, ಅಬುಧಾಬಿ ಸಿಟಿ ಟೂರ್,
ಶಾರ್ಜ ಸಿಟಿ ಟೂರ್, ಮಿರಾಕಲ್ ಗಾರ್ಡನ್, ಗ್ಲೋಬಲ್ ವಿಲೇಜ್ ಹಾಗೂ ಇತರೆ



### 5 ದಿನಗಳ ಪೂರಿ ಜಗನ್ನಾಥ, ಕೋನಾರ್ಕ್, ಭುವನೇಶ್ವರ್

ಜಗನ್ನಾಥ ಮಂದಿರ, ಸನ್ ಟೆಂಪಲ್, ಅಂಗರಾಜ ಟೆಂಪಲ್ ಹಾಗೂ ಇತರೆ



### 7 ದಿನಗಳ ಜಪಾನ್

ಟೋಕಿಯೋ, ಓಸಾಕ, ಕ್ಯೋಯೋಟೊ, ನಾರಾ, ಹಿರೋಶಿಮಾ




### 14 ದಿನಗಳ ಚಾರ್‌ಧಾಮ್ ಯಾತ್ರೆ

ಬದರಿನಾಥ್, ಕೇದಾರನಾಥ್, ಯಮುನೋತ್ರಿ, ಗಂಗೋತ್ರಿ



### 6 ದಿನಗಳ ಶ್ರೀಲಂಕಾ (ರಾಮಾಯಣ ಸ್ಪೆಷಲ್)

ಕೊಲೊಂಬೊ, ನೆಗೊಂಬೊ, ಕ್ಯಾಂಡಿ, ದಾಂಬುಲಾ, ಸೀತಾ ಅಶೋಕವನ



**ಸಂಪರ್ಕಿಸಿ : 9900080793 / 9900093613 / 9900093616**